## ದೇವೀ ಧ್ಯಾನ

# ಸೌಂದರ್ಯಲಹರೀ

**ವಿದ್ವಾನ್ ಎಚ್.ವಿ.ನಾಗರಾಜ ರಾವ್**



ದಸರಾ ಅಂಬಾರಿಯ ಶ್ರೀಚಾಮುಂಡೇಶ್ವರಿ ವಿಗ್ರಹ

ಶ್ರೀಶಂಕರಾಚಾರ್ಯರಿಂದ ಅನುಗೃಹೀತವಾದ ಸ್ತೋತ್ರಗಳಲ್ಲಿ ಸುಂದರವೂ ಶಾಸ್ತ್ರಾರ್ಥಗಂಭೀರವೂ ಆಗಿರುವ ಸ್ತೋತ್ರರತ್ನ ಸೌಂದರ್ಯಲಹರೀ. ಲಹರೀ ಎಂದರೆ ಅಲೆ. ಅಲೆಅಲೆಯಾಗಿ ಸೌಂದರ್ಯದ ನಿರೂಪಣೆಯಿರುವುದರಿಂದ ಈ ಹೆಸರು ಬಂದಿರ ಬಹುದು. ಗ್ರಂಥದಲ್ಲೇ ಒಮ್ಮೆ ಈ ಶಬ್ದವನ್ನು ಆಚಾರ್ಯರು ಪ್ರಯೋಗಿಸಿದ್ದಾರೆ.

ತನೋತು ಕ್ಷೇಮಂ ನಸ್ತವ ವದನ ಸೌಂದರ್ಯಲಹರೀ–
ಪರೀವಾಹ ಸ್ರೋತಸ್ಸರಣಿರಿವ ಸೀಮಂತಸರಣಿಃ ।
ವಹಂತೀ ಸಿಂದೂರಂ ಪ್ರಬಲಕಬರೀಭಾರತಿಮಿರ–
ದ್ವಿಷಾಂ ವೃಂದೈರ್ಬಂದೀಕೃತಮಿವ ನವೀನಾರ್ಕಕಿರಣಮ್।

(ಪದ್ಯ ೪೪)

ಮಾನ್ಯ ಲೇಖಕರು ಸಂಸ್ಕೃತ ವಿದ್ವಾಂಸರು; ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧಕರಾಗಿದ್ದರು. ದೇಶವಿದೇಶ ಗಳಲ್ಲಿ ಸಂಸ್ಕೃತವನ್ನು ಬೋಧಿಸುತ್ತಿರುವ ಪ್ರತಿಭಾವಂತರು.

"ತಾಯಿ, ನಿನ್ನ ಬೈತಲೆಯ ರೇಖೆ, ಮುಖಸೌಂದರ್ಯದ ಅಲೆಗಳ ಪ್ರವಾಹಮಾರ್ಗದಂತೆ ಶೋಭಿಸುತ್ತಿದೆ. ದಟ್ಟವಾದ ಕೇಶಪಾಶದ ರೂಪದಲ್ಲಿ ಕಾಣುವ ಕಗ್ಗತ್ತಲೆಯಿಂದ ಸೆರೆಹಿಡಿಯಲ್ಪಟ್ಟ ಸೂರ್ಯನ ಕಿರಣದಂತೆ ಕಾಣುವ ಸಿಂದೂರದಿಂದ ಆ ಬೈತಲೆ ಅಲಂಕೃತವಾಗಿದೆ. ಅದು ನಮಗೆ ಕ್ಷೇಮವನ್ನು ಅಧಿಕವಾಗಿ ತರಲಿ."

ಈ ಗ್ರಂಥವು ದೇವಿಯ ಮಹಿಮೆಯನ್ನೂ ಸೌಂದರ್ಯವನ್ನೂ ವರ್ಣಿಸಿ ಆಕೆಯ ಅನುಗ್ರಹವನ್ನು ತಂದುಕೊಡುವುದರಿಂದ **ಸ್ತೋತ್ರ;** ಅಲಂಕಾರಗಳಿಂದಲೂ ಗುಣಗಳಿಂದಲೂ ತುಂಬಿ ರಸವತ್ತಾಗಿ ಶೋಭಿಸುವುದರಿಂದ **ಕಾವ್ಯ;** ತಂತ್ರಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ರಹಸ್ಯಗಳನ್ನು ಒಳಗೊಂಡಿರುವುದರಿಂದ **ಶಾಸ್ತ್ರ**. ಹೀಗೆ ಇದನ್ನು **ಸ್ತೋತ್ರಕಾವ್ಯ**ವೆಂದೂ, **ಶಾಸ್ತ್ರಕಾವ್ಯ**ವೆಂದೂ ಕರೆಯಬಹುದಾಗಿದೆ. ಇದನ್ನು ರಚಿಸಿದವರು ಆದಿಶಂಕರಾಚಾರ್ಯ ಭಗವತ್ಪಾದರೆಂದು ಅನೇಕ ಹಸ್ತಪ್ರತಿಗಳಿಂದ ವಿದಿತವಾಗುತ್ತದೆ. ಆದರೆ ಕೆಲವರು ವ್ಯಾಖ್ಯಾನಕಾರರು ಈ ಬಗೆಗೆ ಹಲವು ಅಭಿಪ್ರಾಯಗಳಿವೆಯೆಂದು ತಿಳಿಸಿದ್ದಾರೆ.

ಸ್ತೋತ್ರಮೇತದ್ ವದಂತ್ಯೇಕೇ ಶಿವೇನ ಪರಿಭಾಷಿತಮ್ ।
ತಸ್ಯೈವಾಂಶಾವತಾರೇಣ ಶಂಕರೇಣೇತಿ ಕೇಚನ ॥
ಕೇಚಿದ್ವದಂತ್ಯಾದ್ಯಶಕ್ತೇರ್ಲಲಿತಾಯಾ ಮಹೌಜಸಃ ।
ದಶನೇಭ್ಯಃ ಸಮುದ್ಭೂತಮಿತಿ ನಾನಾವಿಧಾ ಶ್ರುತಿಃ ॥

"ಇದನ್ನು ಸಾಕ್ಷಾತ್ ಶಿವನೇ ರಚಿಸಿದನೆಂದು ಕೆಲವರೂ, ಶಿವನ ಅಂಶಾವತಾರರಾಗಿದ್ದ ಶಂಕರಾಚಾರ್ಯರು ರಚಿಸಿದರೆಂದು ಮತ್ತೆ ಕೆಲವರೂ, ಆದಿಶಕ್ತಿ ಲಲಿತೆಯ ಹಲ್ಲುಗಳಿಂದ ಈ ಸ್ತೋತ್ರ ಹುಟ್ಟಿತೆಂದು ಇತರರೂ ಹೇಳುತ್ತಾರೆ" – ಎಂದು ಡಿಂಡಿಮಾ ವ್ಯಾಖ್ಯಾನಕಾರನು ಹೇಳುತ್ತಾನೆ. **ಸುಧಾವಿದ್ಯೋತಿನೀ** ಎಂಬ ವ್ಯಾಖ್ಯಾನದಲ್ಲಿ ಪ್ರವರಸೇನನೆಂಬ ರಾಜನು ಈ ಸ್ತೋತ್ರಕಾವ್ಯವನ್ನು ರಚಿಸಿದನೆಂದು ಹೇಳಲಾಗಿದೆ.

ಶಿವನೇ ಸೌಂದರ್ಯಲಹರಿಯನ್ನು ರಚಿಸಿ ಆಚಾರ್ಯರಿಗೆ ಕೊಟ್ಟ ಬಗೆಗೂ ಒಂದು ಕಥೆಯಿದೆ. ಆಚಾರ್ಯರು ಕೈಲಾಸಕ್ಕೆ ಹೋಗಿ ಪಾರ್ವತೀಪರಮೇಶ್ವರರ ದರ್ಶನವನ್ನು ಪಡೆದರಂತೆ. ಆಗ ಪರಮೇಶ್ವರನು ಅವರಿಗೆ ಐದು ಸ್ಫಟಿಕಲಿಂಗಗಳನ್ನೂ ತಾಳಪತ್ರಗಳ ಒಂದು ಕಟ್ಟನ್ನೂ ಕೊಟ್ಟನು. ಆ ಕಟ್ಟಿನಲ್ಲಿ ಪಾರ್ವತಿಯ ಸ್ತುತಿಯ ಒಂದು ನೂರು ಪದ್ಯಗಳಿದ್ದುವು. ಸ್ಫಟಿಕಲಿಂಗಗಳನ್ನೂ ತಾಳಪತ್ರಗಳ ಕಟ್ಟನ್ನೂ ತೆಗೆದುಕೊಂಡು ಆಚಾರ್ಯರು ಹೊರಟಾಗ ನಂದಿಕೇಶ್ವರನು ನೋಡಿಬಿಟ್ಟನು. ಆಚಾರ್ಯರ ಕೈಯಲ್ಲಿದ್ದ ಕಟ್ಟನ್ನು

ಸೆಳೆದುಕೊಂಡನು. ಆಚಾರ್ಯರು ಲೋಕದ ಹಿತಕ್ಕಾಗಿ ಅದನ್ನು ತರಲು ಯತ್ನಿಸಿದರು. ಈ ಎಳೆದಾಟದಲ್ಲಿ ಕಟ್ಟಿನ ಮೊದಲ ಭಾಗ – ಎಂದರೆ ಒಂದರಿಂದ ನಲವತ್ತೊಂದನೆಯ ಪದ್ಯದವರೆಗಿನ ಭಾಗ ಆಚಾರ್ಯರಿಗೆ ಸಿಕ್ಕಿತು. ಉಳಿದ ಐವತ್ತೊಂಬತ್ತು ಪದ್ಯಗಳನ್ನು ನಂದಿಕೇಶ್ವರ ಇಟ್ಟುಕೊಂಡನು. ಭೂಲೋಕಕ್ಕೆ ಹಿಂದಿರುಗಿದ ಮೇಲೆ ತಾಯಿ ಪಾರ್ವತಿಯ ಪ್ರೇರಣೆಯಿಂದ ಐವತ್ತೊಂಬತ್ತು ಪದ್ಯಗಳನ್ನು ಆಚಾರ್ಯರು ತಾವೇ ರಚಿಸಿ ಸ್ತೋತ್ರವನ್ನು ಪೂರ್ಣ ಮಾಡಿದರು. ಕೆಲವರು ಮೊದಲಿನ ನಲವತ್ತೊಂದು ಪದ್ಯಗಳನ್ನು **ಆನಂದಲಹರೀ** ಎಂದೂ, ಉಳಿದ ಐವತ್ತೊಂಬತ್ತು ಪದ್ಯಗಳನ್ನು **ಸೌಂದರ್ಯಲಹರೀ** ಎಂದೂ ಕರೆಯುತ್ತಾರೆ. ಆನಂದಲಹರಿಯ ಅನೇಕ ಪದ್ಯಗಳು ಮಂತ್ರಶಾಸ್ತ್ರದ ಸೂಕ್ಷ್ಮ ವಿಚಾರಗಳನ್ನು ಅಳವಡಿಸಿಕೊಂಡಿರುವುದರಿಂದ ಸಾಮಾನ್ಯರಿಗೆ ಅವು ದುರ್ಗಮವಾಗಿವೆ. ವ್ಯಾಖ್ಯಾನಗಳ ನೆರವಿಲ್ಲದೆ ಅವುಗಳ ತಾತ್ಪರ್ಯವನ್ನು ತಿಳಿದುಕೊಳ್ಳುವುದು ಅಸಾಧ್ಯ. ದೇವಿಯ ಸೌಂದರ್ಯವನ್ನು ಕುರಿತೇ ರಚಿತವಾಗಿರುವ ಈ ಪದ್ಯಗಳನ್ನು ಸಂಸ್ಕೃತ ಜ್ಞಾನವಿರುವ ಯಾರು ಬೇಕಾದರೂ ಅರಿತುಕೊಳ್ಳಬಹುದು. ಮಂತ್ರಶಾಸ್ತ್ರದಂತೆ ಅರ್ಥ ಮಾಡಿಕೊಂಡು ಅನುಷ್ಠಾನ ಮಾಡಬಲ್ಲ ಮಹಾನುಭಾವರು ಲಕ್ಷಕ್ಕೋ ಕೋಟಿಗೋ ಒಬ್ಬರಿರಬಹುದು.

## ಸೌಂದರ್ಯಲಹರಿಯ ವ್ಯಾಖ್ಯಾನಗಳು

ಸೌಂದರ್ಯಲಹರಿಗೆ ಹಲವು ಪ್ರಾಚೀನ ಸಂಸ್ಕೃತ ವ್ಯಾಖ್ಯಾನಗಳಿವೆ. ಪ್ರವರಸೇನವಿರಚಿತವಾದ **ಸುಧಾವಿದ್ಯೋತಿನೀ, ಡಿಂಡಿಮಾ, ಕಾಮದೇವಸೂರೀಯಾ, ಸಹಜಾನಂದೀಯಾ,** ಕೈವಲ್ಯಾಶ್ರಮಿಯ **ಸೌಭಾಗ್ಯವರ್ಧಿನೀ,** ಲಕ್ಷ್ಮೀಧರಾಚಾರ್ಯನ **ಲಕ್ಷ್ಮೀಧರಾ** ಮುಂತಾದುವು. ಇವುಗಳಲ್ಲಿ **ಲಕ್ಷ್ಮೀಧರಾ** ಅತ್ಯಂತ ಪ್ರೌಢವೂ ಹೆಚ್ಚು ಪ್ರಸಿದ್ಧವೂ ಆಗಿದೆ. ಹಳಗನ್ನಡದಲ್ಲಿ ಜಕ್ಕಣಾಮಾತ್ಯನು ಈ ಕೃತಿಗೆ ಒಂದು ಟೀಕೆಯನ್ನು ಬರೆದಿದ್ದಾನೆ.

## ಅದ್ವೈತ ಸಿದ್ಧಾಂತದಲ್ಲಿ ಭಕ್ತಿ

ಅದ್ವೈತ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯರಾದ ಶಂಕರ ಭಗವತ್ಪಾದರು ಭಕ್ತಿಪ್ರಧಾನವಾದ ಸ್ತೋತ್ರಗಳನ್ನೇಕೆ ರಚಿಸಿದರು? ಅದ್ವೈತ ಸಿದ್ಧಾಂತದ ಅನುಸಾರ ಜ್ಞಾನವೇ ಮೋಕ್ಷಕ್ಕೆ ಕಾರಣವಲ್ಲವೆ? ಎಂದು ಕೆಲವರು ಪ್ರಶ್ನಿಸುತ್ತಾರೆ. ಆದರೆ ಭಕ್ತಿಗೂ ಜ್ಞಾನಕ್ಕೂ ಯಾವ ವಿರೋಧವೂ ಇಲ್ಲ ಎಂಬುದನ್ನು ನಾವು ಮರೆಯಬಾರದು. **ಮೋಕ್ಷಕಾರಣಸಾಮಗ್ರ್ಯಾಂ ಭಕ್ತಿರೇವ ಗರೀಯಸೀ** – ಮೋಕ್ಷಕ್ಕೆ ಕಾರಣವಾಗುವ ಸಾಧನಗಳಲ್ಲಿ ಭಕ್ತಿಯು ಅತಿ ಶ್ರೇಷ್ಠವಾದುದು ಎಂದು 'ವಿವೇಕಚೂಡಾಮಣಿ' ಯಲ್ಲಿ ಆಚಾರ್ಯರು ಪ್ರತಿಪಾದಿಸಿದ್ದಾರೆ.

ದ್ವೈತ ಮತ್ತು ವಿಶಿಷ್ಟಾದ್ವೈತ ಸಂಪ್ರದಾಯಗಳಲ್ಲಂತೂ ಭಕ್ತಿಗೆ ವಿಶೇಷವಾದ ಮನ್ನಣೆ. **ಮಮ ಭವತು ಪರಸ್ಮಿನ್ ಶೇಮುಷೀ ಭಕ್ತಿರೂಪಾ** – "ಪರಮಾತ್ಮನಲ್ಲಿ ನನಗೆ ಭಕ್ತಿರೂಪವಾದ ಜ್ಞಾನವು ಹುಟ್ಟಲಿ" ಎಂದು ಶ್ರೀರಾಮಾನುಜಾಚಾರ್ಯರು ಹೇಳಿರುವುದನ್ನು ಇಲ್ಲಿ ಗಮನಿಸಬೇಕು. ಶ್ರೀಮನ್ಮಧ್ವಾಚಾರ್ಯರೂ –

**ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।**
**ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥**

"ಮಹಿಮೆಯ ಜ್ಞಾನವನ್ನು ಮೊದಲ ಮೆಟ್ಟಿಲನ್ನಾಗಿ ಹೊಂದಿರುವ, ದೃಢವಾದ, ಉಳಿದ ಎಲ್ಲ ಭಾವನೆಗಳಿಗಿಂತಲೂ ಅಧಿಕವಾದ ಸ್ನೇಹವೇ **ಭಕ್ತಿ** ಎಂದು ಕರೆಯಲ್ಪಟ್ಟಿದೆ. ಅದರಿಂದಲೇ ಮುಕ್ತಿ. ಬೇರೆ ಯಾವ ಉಪಾಯದಿಂದಲೂ ಮುಕ್ತಿ ದೊರಕದು" ಎಂದು ನಿರೂಪಿಸುವಾಗ ಭಕ್ತಿಯ ಮೊದಲ ಮೆಟ್ಟಿಲು ಜ್ಞಾನ ಎಂದು ಸ್ಪಷ್ಟಪಡಿಸಿದ್ದಾರೆ. ಆಚಾರ್ಯ ಶಂಕರರೂ ಗೀತಾಭಾಷ್ಯದಲ್ಲಿ **ಭಕ್ತೇಃ ಪುನರ್ಗ್ರಹಣಾದ್ ಭಕ್ತಿಮಾತ್ರೇಣ ಕೇವಲೇನ ಶಾಸ್ತ್ರಸಂಪ್ರದಾನೇ ಪಾತ್ರಂ ಭವತೀತಿ ಗಮ್ಯತೇ** – "ಭಕ್ತಿಯನ್ನು ಮತ್ತೆ ಉಲ್ಲೇಖಿಸಿರುವುದರಿಂದ, ಕೇವಲ ಭಕ್ತಿಯಿಂದಲೇ ಶಾಸ್ತ್ರಜ್ಞಾನವನ್ನು ಪಡೆದುಕೊಳ್ಳಲು ಅರ್ಹನಾಗುತ್ತಾನೆ ಎನ್ನುವುದು ತಿಳಿದುಬರುತ್ತದೆ" ಎಂದು ಹೇಳಿ ಶಾಸ್ತ್ರಜ್ಞಾನವನ್ನು ಪಡೆಯಲು ಭಕ್ತಿಯುಳ್ಳವನೇ ಪಾತ್ರ ಎಂದು ಪ್ರತಿಪಾದಿಸಿದ್ದಾರೆ.

ಗೀತೆಯ ಹದಿನೆಂಟನೆಯ ಅಧ್ಯಾಯದ ೬೫ ನೆಯ ಶ್ಲೋಕದ ವ್ಯಾಖ್ಯಾನದಲ್ಲಿ ಅವರು **ಏವಂ ಭಗವತಃ ಸತ್ಯಪ್ರತಿಜ್ಞತ್ವಂ ಬುದ್ಧ್ವಾ ಭಗವದ್‌ಭಕ್ತೇರವಶ್ಯಂಭಾವಿ ಮೋಕ್ಷಫಲಮವಧಾರ್ಯ ಭಗವತ್ ಚರಣೈಕಪರಾಯಣೋ ಭವೇದಿತಿ ವಾಕ್ಯಾರ್ಥಃ** – "ಹೀಗೆ ಭಗವಂತನ ಮಾತು ಸತ್ಯವೆಂದು ತಿಳಿದುಕೊಂಡು, ಭಗವದ್‌ಭಕ್ತಿಗೋಸ್ಕರವಾಗಿ ಭಗವಂತನ ಪಾದಗಳನ್ನು ಆಶ್ರಯಿಸಬೇಕು" ಎಂದು ಹೇಳಿದ್ದಾರೆ. ಬ್ರಹ್ಮಸೂತ್ರಭಾಷ್ಯದಲ್ಲೂ **ತದ್ ಅನುಗ್ರಹಹೇತುಕೇನೈವ ಚ ವಿಜ್ಞಾನೇನ ಮೋಕ್ಷಸಿದ್ಧಿರ್ಭವಿತುಮರ್ಹತಿ** – "ಭಗವಂತನ ಅನುಗ್ರಹದಿಂದ ಉಂಟಾಗುವ ವಿಜ್ಞಾನದಿಂದಲೇ ಮೋಕ್ಷ ಉಂಟಾಗಲು ಸಾಧ್ಯ" ಎಂದು ಭಗವಂತನ ಅನುಗ್ರಹದ ಪ್ರಾಧಾನ್ಯವನ್ನು ತಿಳಿಸಿದ್ದಾರೆ. ಜ್ಞಾನ ಉಂಟಾಗಬೇಕಾದರೆ ಭಕ್ತಿಸಾಧ್ಯವಾದ ಭಗವದನುಗ್ರಹ ಬೇಕು ಎಂದು ಇದರ ತಾತ್ಪರ್ಯ. ಆದ್ದರಿಂದ ಅದ್ವೈತದ ಪರಮಾಚಾರ್ಯರಾದ ಶಂಕರರು ಸ್ತೋತ್ರಸಾಹಿತ್ಯವನ್ನು ರಚಿಸಿರುವುದರಲ್ಲಿ ಯಾವ ವಿರೋಧವೂ ಇಲ್ಲ.

## ಶಿವ–ಶಕ್ತಿ

ಶಿವ ಮತ್ತು ಶಕ್ತಿ – ಈ ಎರಡು ತತ್ತ್ವಗಳು ಪರಸ್ಪರ ಭಿನ್ನವಾದರೆ ಅದ್ವೈತಕ್ಕೆ ಹಾನಿ. ಶಂಕರರ ಶಿವಾನಂದಲಹರಿಯಲ್ಲಿ ಶಿವನಿಗೆ ಪ್ರಾಧಾನ್ಯ. ಸೌಂದರ್ಯಲಹರಿಯಲ್ಲಿ ಶಕ್ತಿಗೆ ಪ್ರಾಧಾನ್ಯ. ಪರಮಾರ್ಥದೃಷ್ಟಿಯಲ್ಲಿ ಅವರಿಬ್ಬರೂ ಒಂದೇ. **ಶಕ್ತಿ–ಶಕ್ತಿಮತೋರಭೇದಾತ್** – ಶಕ್ತಿಗೂ ಶಕ್ತಿಮಂತನಿಗೂ ಅಭೇದ – ಆದರೆ ಉಪಾಸನೆಯ ದೃಷ್ಟಿಯಿಂದ ಅವರಲ್ಲಿ ಭೇದವನ್ನು ಕಲ್ಪಿಸಲಾಗಿದೆ. ಭೇದಾಶ್ರಯವಾಗಿ ಉಪಾಸನೆಯನ್ನು ಮಾಡಿದರೂ ಅದು ಅದ್ವೈತಜ್ಞಾನಕ್ಕೆ ಉಪಕಾರಕ ಎಂದು ಆಚಾರ್ಯ ಶಂಕರರು ಹೇಳಿದ್ದಾರೆ: **ತಾನ್ಯೇತಾನ್ಯುಪಾಸನಾನಿ ಸತ್ತ್ವಶುದ್ಧಿಕರತ್ವೇನ ವಸ್ತುತದ್ಭಾವಭಾಸಕತ್ವಾದದ್ವೈತೋಪಕಾರಕಾಣಿ । ಆಲಂಬನವಿಷಯತ್ವಾತ್ ಸುಸಾಧ್ಯಾನಿ ಚ** (ಛಾಂದೋಗ್ಯ ಭಾಷ್ಯ, ಪೀಠಿಕಾ ಭಾಷ್ಯ, ೧.೧.) – "ಈ ಎಲ್ಲ ಉಪಾಸನೆಗಳೂ ಸತ್ವಶುದ್ಧಿಯನ್ನುಂಟುಮಾಡಿ, (ಬ್ರಹ್ಮ)

ವಸ್ತುವನ್ನು ಮತ್ತು ಅದರ ಸ್ವರೂಪವನ್ನು ಬೆಳಗುವುವು. ಆದ್ದರಿಂದ ಅದ್ವೈತಜ್ಞಾನಕ್ಕೆ ಉಪಕಾರಕಗಳಾದ ಇವುಗಳ ಆಲಂಬನವನ್ನು ಹೊಂದಿರುವುದರಿಂದ ಸಾಧಿಸಲು ಶಕ್ಯವಾದುವೂ ಆಗಿವೆ."

ಒಂದೆಡೆ ತಾಯಿಯೇ ಹೆಚ್ಚು ಎಂದು ಹೇಳಿ ಇನ್ನೊಂದೆಡೆ ತಂದೆಯೇ ಹೆಚ್ಚು ಎಂದರೆ ಅವರ ಮಾತಿಗೆ ಅವರದೇ ವಿರೋಧ ವಾಯಿತಲ್ಲ ಎಂದುಕೊಳ್ಳಬಾರದು. ಅವರಿಬ್ಬರೂ ಒಂದೇ. ಶ್ರದ್ಧೆಯ ದೃಢೀಕರಣಕ್ಕಾಗಿ ಬೇರೆ ಬೇರೆ ರೀತಿಯ ಪ್ರತಿಪಾದನೆ ಅಷ್ಟೆ ಎಂದು ತತ್ತ್ವವನ್ನು ತಿಳಿದುಕೊಳ್ಳಬೇಕು. ಈಗ ಸೌಂದರ್ಯಲಹರಿಯ ಕೆಲವು ಪದ್ಯಗಳನ್ನು ನೋಡೋಣ.

**ಶಕ್ತಿಯಿಂದಲೇ ಶಿವನ ಅಸ್ತಿತ್ವ**

**ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ**
**ನ ಚೇದೇವಂ ದೇವೋ ನ ಖಲು ಕುಶಲಃ ಸ್ಪಂದಿತುಮಪಿ ।**
**ಅತಸ್ತ್ವಾಮಾರಾಧ್ಯಾಂ ಹರಿಹರವಿರಿಂಚಾದಿಭಿರಪಿ**
**ಪ್ರಣಂತುಂ ಸ್ತೋತುಂ ವಾ ಕಥಮಕೃತಪುಣ್ಯಃ ಪ್ರಭವತಿ ॥** (ಪದ್ಯ ೧)

"ಶಕ್ತಿಯೊಡನೆ ಇದ್ದಾಗ ಶಿವನು ಪ್ರಭು. ಅವಳಿಲ್ಲದಿದ್ದರೆ ಅವನು ಸ್ಪಂದಿಸಲೂ ಶಕ್ತನಲ್ಲ. ಹರಿ-ಹರ-ಬ್ರಹ್ಮರೂ ಶಕ್ತಿಯನ್ನು ಆರಾಧಿಸುತ್ತಾರೆ. ಆ ಶಕ್ತಿಗೆ ನಮಸ್ಕರಿಸಲು, ಅವಳನ್ನು ಸ್ತುತಿಸಲು ಪುಣ್ಯಗಳಿಸದವನು ಹೇಗೆ ಶಕ್ತನಾಗುವನು?"

**ದೇವಿಯ ಆರಾಧ್ಯ ಸ್ವರೂಪ**

ತ್ರಿಮೂರ್ತಿಗಳೂ ದೇವಿಯನ್ನು ಆರಾಧಿಸಿ ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗುತ್ತಾರೆ ಎಂದು ಈ ಸ್ತೋತ್ರದಲ್ಲಿ ಅನೇಕ ಬಾರಿ ಹೇಳಲಾಗಿದೆ. ಮತ್ತೊಂದು ವಿಶೇಷವೆಂದರೆ ದೇವಿಯ ಆರಾಧ್ಯ ಸ್ವರೂಪದಲ್ಲಿ ಅಭಯಮುದ್ರೆ ಮತ್ತು ವರದಮುದ್ರೆ ಇಲ್ಲ. ಅದನ್ನು ಆಚಾರ್ಯರು ಹೇಳುವ ಬಗೆ ಹೀಗಿದೆ:

**ತ್ವದನ್ಯಃ ಪಾಣಿಭ್ಯಾಮಭಯವರದೋ ದೈವತಗಣಃ**
**ತ್ವಮೇಕಾ ನೈವಾಸಿ ಪ್ರಕಟಿತವರಾಭೀತ್ಯಭಿನಯಾ ।**
**ಭಯಾತ್ ತ್ರಾತುಂ ದಾತುಂ ಫಲಮಪಿ ಚ ವಾಂಛಾಸಮಧಿಕಂ**
**ಶರಣ್ಯೇ ಲೋಕಾನಾಂ ತವ ಹಿ ಚರಣಾವೇವ ನಿಪುಣೌ॥** (ಪದ್ಯ ೪)

"ಬೇರೆ ದೇವತೆಗಳು ಎರಡು ಕೈಗಳಲ್ಲಿ ಅಭಯ ಮತ್ತು ವರದ ಮುದ್ರೆಗಳನ್ನು ಧರಿಸಿರುತ್ತಾರೆ. ನೀನೊಬ್ಬಳು ಅಂಥ ಅಭಿನಯವನ್ನು ಮಾಡುವುದಿಲ್ಲ. ಭಯದಿಂದ ಕಾಪಾಡಲು ಮತ್ತು ಕೇಳಿದುದಕ್ಕಿಂತಲೂ ಹೆಚ್ಚು ಫಲಗಳನ್ನು ನೀಡಲು ನಿನ್ನ ಪಾದಗಳೇ ಸಮರ್ಥವಾಗಿವೆ. ಆದ್ದರಿಂದಲೇ ನೀನು ಲೋಕಶರಣ್ಯೆ."

ತಾಯಿಯ ಪಾದಗಳನ್ನು ನಂಬಿದರೆ ಯಾವ ಭಯವೂ ಇಲ್ಲ. ಎಲ್ಲ ವರಗಳೂ ತಾವಾಗಿಯೇ ಸಿಕ್ಕುತ್ತವೆ ಎಂದು ಇಲ್ಲಿ ದೇವಿಯ ಮಾಹಾತ್ಮ್ಯವನ್ನು ಸೂಚಿಸಲಾಗಿದೆ.

ದೇವಿಗೆ ನಾನಾ ರೂಪಗಳಿವೆ. ಒಂದು ರೂಪದಲ್ಲಿ ವರ-ಅಭಯ ಮುದ್ರೆಗಳಿಲ್ಲ. ಆದರೆ ಆ ದೇವಿಯೇ ಸರಸ್ವತಿಯ ರೂಪವನ್ನು ಧರಿಸಿ ಅನುಗ್ರಹಿಸುವಾಗ ಅವು ಉಂಟು ಎಂಬುದು ಹದಿನೈದನೆಯ ಪದ್ಯದಿಂದ ನಿರೂಪಿತವಾಗಿದೆ.

**ಶರಜ್ಜ್ಯೋತ್ಸ್ನಾ ಶುದ್ಧಾಂ ಶಶಿಯುತ ಜಟಾಜೂಟಮಕುಟಾಂ**
**ವರತ್ರಾಸತ್ರಾಣಸ್ಫಟಿಕಘಟಿಕಾ ಪುಸ್ತಕಕರಾಮ್ ।**
**ಸಕೃನ್ನತ್ವಾ ನತ್ವಾ ಕಥಮಿವ ಸತಾಂ ಸಂನಿದಧತೇ**
**ಮಧುಕ್ಷೀರದ್ರಾಕ್ಷಾಮಧುರಿಮಧುರೀಣಾಃ ಫಣಿತಯಃ॥** (ಪದ್ಯ ೧೫)

"ಸರಸ್ವತೀಸ್ವರೂಪದಲ್ಲಿ ಅವಳು ಬೆಳದಿಂಗಳಿನಂತೆ ಬಿಳುಪಾಗಿದ್ದಾಳೆ. ಅವಳ ಜಟಾಜೂಟದಲ್ಲಿ ಚಂದ್ರನು ಬೆಳಗುತ್ತಿದ್ದಾನೆ. ಅವಳ ನಾಲ್ಕು ಕೈಗಳಲ್ಲಿ ವರ, ಅಭಯ, ಸ್ಫಟಿಕದ ಕೊಡ ಮತ್ತು ಪುಸ್ತಕಗಳಿವೆ. ಅವಳನ್ನೊಮ್ಮೆ ಭಕ್ತಿಯಿಂದ ನಮಸ್ಕರಿಸಿದರೆ ಸಾಕು, ಜೇನು-ಹಾಲು-ದ್ರಾಕ್ಷಿಗಳ ಸವಿಯನ್ನು ಮೀರಿಸುವ ಮಧುರವಾದ ಮಾತುಗಳು ಭಕ್ತನ ಮುಖದಿಂದ ಹೊಮ್ಮುತ್ತವೆ." ವಾಗ್ಮಿತ್ವವನ್ನು ಪಡೆಯಲು ಈ ಪದ್ಯವನ್ನು ಪಠಿಸುತ್ತಾ ಮನನ ಮಾಡಬೇಕು."

**ದೇವಿ-ಉಪಾಸನೆ**

ಕಾವ್ಯಶಕ್ತಿಯು ಉದಯಿಸಲು ಯಾವ ಉಪಾಸನೆ ಮಾಡಬೇಕೆಂಬುದನ್ನು ಹದಿನೇಳನೆಯ ಪದ್ಯ ಹೀಗೆ ತಿಳಿಸಿದೆ:

**ಸವಿತ್ರೀಭಿರ್ವಾಚಾಂ ಶಶಿಮಣಿಶಿಲಾಭಂಗರುಚಿಭಿಃ**
**ವಶಿನ್ಯಾದ್ಯಾಭಿಸ್ತ್ವಾಂ ಸಹ ಜನನಿ ಸಂಚಿಂತಯತಿ ಯಃ ।**
**ಸ ಕರ್ತಾ ಕಾವ್ಯಾನಾಂ ಭವತಿ ಮಹತಾಂ ಭಂಗಿರುಚಿಭಿಃ**
**ವಚೋಭಿರ್ವಾಗ್ದೇವೀ ವದನಕಮಲಾಮೋದಮಧುರೈಃ ॥** (ಪದ್ಯ ೧೭)

"ಚಂದ್ರಕಾಂತಶಿಲೆಯ ಕಾಂತಿಯಿಂದ ಶೋಭಿಸುವ ವಶಿನೀ ಮುಂತಾದ ವಾಗ್‌ಜನನಿಯರ ಜೊತೆಯಲ್ಲಿರುವ ದೇವಿಯನ್ನು ಧ್ಯಾನಿಸುವವನು ಮಹಾಕಾವ್ಯಗಳನ್ನು ರಚಿಸುತ್ತಾನೆ. ಅವನ ನುಡಿಗಳು ವಾಗ್ದೇವಿಯ ಮುಖಪದ್ಮದ ಸೌರಭದಿಂದ ತುಂಬಿರುತ್ತವೆ."

ಹೀಗೆ ಅನೇಕ ವಿಧವಾದ ಸಿದ್ಧಿಗಳನ್ನು ಪಡೆಯಲು ಮಾಡಬೇಕಾದ ಉಪಾಸನೆಗಳನ್ನು ಸೌಂದರ್ಯಲಹರಿಯು ತಿಳಿಸುತ್ತದೆ. ಮೋಕ್ಷಪಥದಲ್ಲಿ ಸಿದ್ಧಿಗಳು ವಿಘ್ನಗಳು. ಆದರಲ್ಲಿ ಆಸಕ್ತರಾದವರನ್ನು ಕೂಡ ಆಧ್ಯಾತ್ಮಿಕ ಮಾರ್ಗಕ್ಕೆ ಕರೆತರಲು ಆಚಾರ್ಯಶಂಕರರು ಇವುಗಳನ್ನು ಪ್ರತಿಪಾದಿಸಿದ್ದಾರೆ.

(*ಮುಂದುವರಿಯುವುದು*)


**ಪರಮಹಂಸ ಪ್ರತಿಷ್ಠಾನ (ರಿ)**
**'ಆಸರೆ' ಅಶಕ್ತ ಹಿರಿಯರ ಸೇವಾ ಕೇಂದ್ರ**
**ಗೋಪಾಳ, ಶಿವಮೊಗ್ಗ**

**ಹಾಸಿಗೆ ಹಿಡಿದಿರುವ ವೃದ್ಧರಿಗೆ ವಸತಿ, ಊಟೋಪಚಾರ, ಆರೈಕೆ, ಮೇಲ್ವಿಚಾರಣೆ, ವೈದ್ಯಕೀಯ ತಪಾಸಣೆ ಹಾಗೂ ಆಪ್ತಸಲಹೆ.**

**ಅಲ್ಪ ಹಾಗೂ ದೀರ್ಘಕಾಲದ ಸೇವೆಗಾಗಿ ಸಂಪರ್ಕಿಸಿ:**
**98444-23484; 98440-72959**